ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–12**

E-mail : Commissioner.pue@gmail.com. Ph.No. : 23361857, 23361858 Fax : 23361852

**ಸಂಖ್ಯೆ** : ಪಪೂಶಿಇ/ಶೈಶಾ/ರ.ಪ್ರ.ಮಾ/2021–22 **ದಿನಾಂಕ** : ೨೭-01–2022

## ಸುತ್ತೋಲೆ

**ವಿಷಯ** : ರಸಾಯನಶಾಸ್ತ್ರ ವಿಷಯದ ಪ್ರಯೋಗಾಲಯದಲ್ಲಿ ಟೈಟ್ರೇಶನ್ ಪ್ರಯೋಗವನ್ನು ಮಾಡುವ ವಿಧಾನದಲ್ಲಿ ಮಾರ್ಪಾಡು ಮಾಡುವ ಬಗ್ಗೆ ಮತ್ತು ಕೆಲವು ಪ್ರಯೋಗಗಳ ಮಾಹಿತಿ ನೀಡುವ ಬಗ್ಗೆ.

**ಉಲ್ಲೇಖ** : ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ರಸಾಯನಶಾಸ್ತ್ರ ಸಂಘ, ಇವರ ಪತ್ರ ದಿನಾಂಕ : 20–12–2021.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ರಸಾಯನಶಾಸ್ತ್ರ ಸಂಘ, ಇವರು ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿಜ್ಞಾನ ವಿದ್ಯಾರ್ಥಿಗಳಿಗೆ ರಸಾಯನಶಾಸ್ತ್ರ ವಿಷಯದಲ್ಲಿ ಟೈಟ್ರೇಶನ್ (Titration) ಪ್ರಯೋಗವನ್ನು ಮಾಡುವಾಗ ಪಿಪೆಟ್‌ನ್ನು (Pipette) ಉಪಯೋಗಿಸಿ ಬಾಯಿಯಿಂದ ದ್ರಾವಣವನ್ನು ಎಳೆಯುವುದು ಸಾಮಾನ್ಯ ವಿಧಾನವಾಗಿದೆ. ಇದರಿಂದ ಕೋವಿಡ್–19 ವೈರಾಣು ಈ ಪ್ರಯೋಗ ಮಾಡುವಾಗ ವಿದ್ಯಾರ್ಥಿಗಳಿಂದ ವಿದ್ಯಾರ್ಥಿಗಳಿಗೆ ಹರಡುವ ಸಾಧ್ಯತೆ ಹೆಚ್ಚಾಗಿರುತ್ತದೆಂದು ತಿಳಿಸಿರುತ್ತಾರೆ.

ಆದ್ದರಿಂದ 2021–22ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಮಾತ್ರ ಕೋವಿಡ್–19ರ ಸಮಯದಲ್ಲಿ ವಿದ್ಯಾರ್ಥಿಗಳ ಆರೋಗ್ಯ ಮತ್ತು ಭವಿಷ್ಯದ ದೃಷ್ಠಿಯಿಂದ ಮೇಲೆ ತಿಳಿಸಿದ ಪ್ರಯೋಗವನ್ನು ಈ ಕೆಳಗಿನಂತೆ ಮಾಡಲು ಈ ಮೂಲಕ ಸೂಚಿಸಿದೆ.

1. Pipette ನ್ನು ಉಪಯೋಗಿಸುವ ಬದಲು ಮೆಜರಿಂಗ್ ಜಾರ್ (10 ಎಂ.ಎಲ್. ಅಥವಾ 25 ಎಂ. ಎಲ್.) ಅನ್ನು ಉಪಯೋಗಿಸುವುದು.
2. ನಿಖರತೆಗೆ (accuracy) ಮಹತ್ವ ಕೊಡುವ ಬದಲು ಪ್ರಯೋಗ ಮಾಡುವ ವಿಧಾನಕ್ಕೆ ಹೆಚ್ಚು ಮಹತ್ವ ಕೊಡುವುದು.

....2

3. ಪ್ರಾಯೋಗಿಕ ಪರೀಕ್ಷಾ ಸಮಯದಲ್ಲಿ
   - ಪ್ರಯೋಗ ಮಾಡುವ ವಿಧಾನಕ್ಕೆ 4 ಅಂಕಗಳನ್ನು ನೀಡುವುದು.
   - ಮೂರು ಪ್ರಯತ್ನಗಳಲ್ಲಿ (3 Trials) Burette Reading ನ್ನು ಪಡೆಯುವುದಕ್ಕೆ 3 ಅಂಕಗಳು (ಪ್ರತಿ ಪ್ರಯತ್ನಕ್ಕೆ 1 ಅಂಕ).
   - ಮೊಲಾರಿಟಿ (Molarity) ಲೆಕ್ಕ ಮಾಡುವ ವಿಧಾನಕ್ಕೆ 03 ಅಂಕಗಳನ್ನು (ಸೂತ್ರಕ್ಕೆ 01 ಅಂಕ, ಸೂತ್ರದಲ್ಲಿ ಸೇರಿಸುವುದಕ್ಕೆ 01 ಅಂಕ (Substitution) – ಅಂಕ, ಲೆಕ್ಕ ಹಾಕಿ ಉತ್ತರ ಮತ್ತು ಯೂನಿಟ್ -01 ಅಂಕ.

ಮುಂದುವರೆದು ಈ ವರ್ಷದ ಪ್ರಾಯೋಗಿಕ ಶಾಲೆಯಲ್ಲಿ ಕನಿಷ್ಠ 6 Salt ಗಳನ್ನು ವಿದ್ಯಾರ್ಥಿಗಳಿಗೆ ಮಾಡಿಸುವುದು ಎಂದು ಈ ಮೂಲಕ ಸೂಚಿಸಲಾಗಿದೆ.

ಮಾನ್ಯ ನಿರ್ದೇಶಕರ ಮೌಖಿಕ ಆದೇಶದ ಮೇರೆಗೆ

R Kusum
24/01/2022

ಜಂಟಿ ನಿರ್ದೇಶಕರು (ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

**ಪ್ರತಿಗಳು,**

1. ನಿರ್ದೇಶಕರ ಆಪ್ತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು. ಇವರಿಗೆ ಇಲಾಖಾ ಜಾಲತಾಣದಲ್ಲಿ ಅಳವಡಿಸಲು ಹಾಗೂ ರಾಜ್ಯದ ಎಲ್ಲಾ ಉಪನಿರ್ದೇಶಕರುಗಳ ಇ-ಮೇಲ್ ವಿಳಾಸಕ್ಕೆ ಕಳುಹಿಸಲು.
4. ಕಛೇರಿ ಪ್ರತಿ